ಫಾರೆಸ್ಟ್ ಇಲಾಖೆ.

ಸಂದಲ್ ಹರಾಜಿ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟ್.	ಕೋ	ಹರಾಜು ತಾರೀಖು		ಹರಾಜಿಗೆ ಇಡಲ್ಪಡುವ ಸ್ಯಾಂಡಲ್ ಮರಗಳು.	ಪರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್	ತಾರೀಖು 18	200	
2	ಡಿಟೋ ...	ಸಾಗರ ...	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟ್ಯಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್	ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟ್ಯಗಳು ಕೋಲಾರದ 5 ಟ್ಯಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ	...	2,400	

ಎಂ. ಮುತ್ತಣ್ಣ, ಸರ್ವೇಯರ್ ಆಫ್ ಫಾರೆಸ್ಟ್ಸ್, ಇ/ ಮೈಸೂರು.

ನೋಟಿಫಿಕೇಷನ್; ತಾರೀಖು ನೆ ಡಿಸೆಂಬರ್ 1909.

1900ನೆ ಮೈಸೂರು ಫಾರೆಸ್ಟ್ ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪ್ಸೀಲ್ ಬಾಬತು ನಾವು ಶಿವಮೊಗ್ಗ ತಾಲ್ಲೂಕು ಗಾಜನೂರು ಮಾಗಣಿ ಮತ್ತೂರು ಅಗ್ರಹಾರದ ವೆಂಕಟೇಶಾವಧಾನಿಗಳ ಮನೆಯಲ್ಲಿ ಶಿಕ್ಕಿದ್ದು.

ಇದಕ್ಕೆ ಹಕ್ಕುದಾರರು ಯಾರಾದರೂ ಇದ್ದಲ್ಲಿ ಅವರು ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಏಜೆಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷನ್ ತಾರೀಖು ಆಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ರೂಬುರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಟ್ಟು ಮೂಲು ತೆಗದುಕೊಂಡು ಹೋಗಬಹುದು. ತಪ್ಪಿದರೆ ಸದರಿ ಮೂಲನ್ನು ಸರ್ಕಾರಕ್ಕೆ ಶೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ ಮತ್ತು ಯಾವಹಕ್ಕೂ ನಂತರ ಅಂಗೀಕರಿಸಲ್ಪಡಲಾರದು.

ಜಾತಿ.	ಲಾಂಬಿ.	ರುಂದಿ.	ಕಡಿತ ಸ್ಥಳ.	ಪರಾ.
ನಾಗುವಾನಿ ...	19'—4"	3'—3	ಶಿವಮೊಗ್ಗ ತಾ| ಗಾಜನೂರು ಮಾಗಣಿ ಮತ್ತೂರು ಅಗ್ರಹಾರದ ವೆಂಕಟೇಶಾವಧಾನಿಗಳ ಮನೆಯಲ್ಲಿ.	ಜೋರನಡೆಹಳ್ಳಿ ಪಟೇಲ್ ಮದಾರ ಸಾಬಿಯ ವಶದಲ್ಲಿ ಇದೆ.

ಇಸ್ತಿಹಾರ್.

ತಾರೀಖು 12ನೆ ಡಿಸೆಂಬರ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಪಟ್ಟಿಯಲ್ಲಿ ನಮೂದಿರುವ ಶಿವಮೊಗ್ಗ ರೇಂಜು ಫಾರೆಸ್ಟುಗಳ ಬಾಬತು ಅದರಲ್ಲಿ ಕಂಡ ವೊತ್ತಾ ನಿಂತಿರುವ ನಾಟಾಗಳು ಪಟ್ಟಿಯಲ್ಲಿ ಕಾಣಿಸಿರುವ ತಾರೀಖು ಮತ್ತು ಸ್ಥಳ

ಗಳಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಅವರಿಂದ ನೇಮಿಸಲ್ಪಟ್ಟ ಮತ್ತಾವ ಆಫಿಸರಿಂದಲಾಗಲಿ ಬಹಿರಂಗವಾಗಿ ಹರಾಜು ಹಾಕಿಸಲ್ಪಡುತ್ತೆ. ಹರಾಜು ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ಫಾರೆಸ್ಟ್ಸಿನ ಹೆಸರು.	ವರ್ಕಿಂಗ್ ಸರ್ಕಲ್.	ಕೂಪು ನಂಬರು ಮತ್ತು ವಿಸ್ತೀರ್ಣ.	ಜಾತಿ ತಪಸೀಲು.	ನಂಬರ್.	ಸುಮಾರು ಅಂದಾಜು ಅಡಿ.	ಹರಾಜಾಗುವ ಸ್ಥಳ ಮತ್ತು ತಾರೀಖು.
ಮಸರೂರು..	ದಕ್ಷಿಣ ವರ್ಕಿಂಗ್ ಸರ್ಕಲ್.	7ನೆ ಕೂಪು, 280 ಎಕ್ಕರೆ.	ತ್ಯಾಗ ...	58	1,800	ಅಯನೂರು 4ನೆ ಜನವರಿ 1910.
			ಮತ್ತಿ ...	8	150	
			ಹುನಾಲ್ ...	40	800	
			ನಂದಿ ...	13	300	
			ಬೀಟೆ ...	5	150	
ಡಿಟೋ ..	ಉತ್ತರ ವರ್ಕಿಂಗ್ ಸರ್ಕಲ್.	7ನೆ ಕೂಪು, 288 ಎಕರೆ.	ತ್ಯಾಗ ...	11	400	
			ಮತ್ತಿ ...	48	1,000	
			ಎತ್ಯಾಗ ...	63	1,900	
			ಹುನಾಲ್ ...	13	260	
			ನಂದಿ ...	3	75	
			ನೇರಳೆ ...	4	100	
			ಬೀಟೆ ...	2	50	
			ಹೊನ್ನೆ ...	3	75	
ಕಂಸಿ ...	ಬೀರನಬಳೆ ...	7ನೆ ಕೂಪು ...	ತ್ಯಾಗ ...	175	3,500	ಕಂಸಿ 7ನೆ ಜನವರಿ 1910.
			ಎತ್ಯಾಗ ...	17	500	
			ಬೀಟೆ ...	5	150	
			ಹುನಾಲ್ ...	1	20	
			ಮತ್ತಿ ...	1	15	
ಡಿಟೋ ...	ಚಕ್ಕಮಾರಸ ...	149 ಎಕರೆ ...	ಸ್ಟ್ಯಾಂಡರ್ಡ್‌ಗಳನ್ನು ಬಿಟ್ಟು ಮಿಕ ಎಲ್ಲಾ ತ್ಯಾಗದ ಮರಗಳನ್ನು ಕಡಿದು ಕಾಪಿಸ್ ಮಾಡುವದರಿಂದ ಹೊರಡುವ ನಾಟಾಗಳು.			

ಷರತ್ತುಗಳು.

1. ಹರಾಜು ಖೈದಾದ ಕೂಡ್ಲೆ ಹರಾಜುದಾರನು 500 ರೂಪಾಯಿಗಳನ್ನು ಡಿಪಾಜಿಟ್ಟು ತರೀಕ್ ಇಡಬೇಕು. ತಪ್ಪಿದಲ್ಲಿ ಮೂಲು ದುಸರಾ ಹರಾಜು ಮಾಡಿಸಲ್ಪಡುತ್ತಲ್ಲದೆ ಅಂಥಾ ದುಸರಾ ಹರಾಜಿನಲ್ಲಿ ಪೊಸಲಗು ಕಮ್ಮಿಬಂದರೆ ಅವ್ವಲ್ ಹರಾಜುದಾರನು ಆ ನಷ್ಟಕ್ಕೆ ಗುರಿಯಾಗುವದೇಕಾಗುತ್ತೆ. ಲಾಭವೇನಾದರೂ ಬಂದಲ್ಲಿ ಅತನಿಗೆ ಅದರಲ್ಲಿ ಯಾವಹಕ್ಕೂ ಇರುವದಿಲ್ಲ.

2. ಹರಾಜು ಮಂಜೂರಾತಿ ಸಂಗತಿ ತಿಳಿಸಿದ ಒಡನೆ ಹರಾಜುದಾರನು ಸರಿಯಾದ ಛಾಪಾಕಾಗದದವೀಲೆ ಹರಾಜು ಕಾಯದಲ್ಲಿ ತಿಳಿಸುವಂಥಾ ಷರತ್ತುಗಳು ಅನುಸರಿಸಿ ನಡಕೊಳ್ಳಲು ಮುಚ್ಚಳಿಕೆ ಬರದುಕೊಡಬೇಕು.

ಎ. ಪೊನ್ನಸ್ವಾಮಿ ಮೊದಲಿಯಾರ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 8ನೆ ಡಿಸೆಂಬರ್ 1909.

ಕಣಿಯನಪುರ ಬ್ಲಾಕ್ I ಫಾರೆಸ್ಟ್, ಮೈಸೂರು ಡಿಸ್ಟ್ರಿಕ್ಟ್.

ಸ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್‌ಮೆಂಟಿನವರ ವಿವರಿಸಲ್ಪಟ್ಟ ಚಕ್ಕು ಬಂದಿ ಮುಳ್ಳು ಪ್ರದೇಶವು ನಂಬರು 2705—ಫಾರೆಸ್ಟ್ಸ್. 192-08-5; 27-9-09; 30-9-09 ನೆ ಇಸವಿಯ ಗೆಜೆಟಿನಲ್ಲಿ ಫಾರಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟ್	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು	ವಿವರಣೆ.
ಮೈಸೂರು	ಗುಂಡ್ಲುಪೇಟೆ	ಎ. ಗು. 1,952 37	ಕಣಿಯನಪುರ ಬ್ಲಾಕ್ I	ಇರುವ ಪ್ರದೇಶ—ಬಂಡೀಪುರ ಸ್ಟೇಟ್ ಫಾರೆಸ್ಟ್ಸಿಗೆ ಪೂರ್ವ ದಿಕ್ಕಿನಲ್ಲಿರುವ ಕುರುಚೆ ಕಾಡು ಪ್ರದೇಶ. ಚಕ್ಕು ಬಂದಿ. ಉತ್ತರಕ್ಕೆ—ಬೀರಂಬಾಡಿ ಗ್ರಾಮ ಮತ್ತು ಬೀರಂಬಾಡಿ ಮುಳ್ಳು ಜಂಗಲಿಗಳ ಸಂಧ್ಯೆ ಸರಹದ್ದು ಕೂಡುವ ಬಾಂದಿನಿಂದ ಲೈನು ಮರೂ ಆಗಿ ಲಕ್ಕಿಪುರದ ಗ್ರಾಮದ ಸರ್ವೆ 11ನೆ ನಂಬರಿನ ಮಾರ್ಗವಾಗಿ ಆಗ್ನೇಯಕ್ಕೆ $5\frac{3}{4}$ ಫರ್ಲಾಂಗು ಹೋಗಿ, ಲಕ್ಕೀಪುರ ಮತ್ತು ಗೋಪಾಲಪುರ ಗ್ರಾಮಗಳ ಸರಹದ್ದು ಲೈನನ್ನು ಸಂಧಿಸುತ್ತದೆ. ಅಲ್ಲಿಂದ ಗೋಪಾಲಪುರದ ಸರ್ವೆ 143 & 142ರ ಮಾರ್ಗವಾಗಿ $4\frac{1}{4}$ ಫರ್ಲಾಂಗು ಹೋಗಿ ಗೋಪಾಲಪುರ ಮತ್ತು ಕಣಿಗಹಳ್ಳಿ ಗ್ರಾಮಗಳ ಸರಹ

ದ್ದು ಲೈನನ್ನು ಸದರಿ ಗ್ರಾಮಗಳ ದಕ್ಷಿಣ ಬಾಂದಿನಿಂದ $10\frac{1}{2}$ ಫರ್ಲಾಂಗು ಫಾಸಲೆಯಲ್ಲಿ ಸೇರುತ್ತದೆ. ಅಲ್ಲಿಂದ ಅದೇ ಮಾರ್ಗವಾಗಿ, $6\frac{3}{4}$ ಫರ್ಲಾಂಗು ಫಾಸಲೆ ಕಣಗಹಳ್ಳಿ ಗ್ರಾಮದ 39 ನೆ ಮತ್ತು 19ನೆ ಸರ್ವೆ ನಂಬರುಗಳ ಮಾರ್ಗವಾಗಿ ಹೋಗಿ ಕುಣಗಹಳ್ಳಿ ಮತ್ತು ಕಳ್ಳಿಪುರ ಗ್ರಾಮಗಳ ಮಧ್ಯೆ ಸರಹದ್ದು ಲೈನನ್ನು ಕಳ್ಳಿಪುರದ ಸರ್ವೆ 32ನೆ ನಂಬರಿನ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ $4\frac{1}{4}$ ಫರ್ಲಾಂಗು ಫಾಸಲೆಯಲ್ಲಿ ಸಂಧಿಸುತ್ತದೆ. ಅಲ್ಲಿಂದ $4\frac{1}{4}$ ಫರ್ಲಾಂಗು ದೂರ ಅದೇ ಸರಹದ್ದು ಲೈನು ಅನುಸರಿಸಿ ನೈರುತ್ಯ ದಿಕ್ಕಿಗೆ ಹೋಗಿ ಕಳ್ಳಿಪುರದ ಸರ್ವೆ 52ನೆ ನಂಬರು ನೈರುತ್ಯ ಮೂಲೆಯನ್ನು ಸಂಧಿಸುತ್ತದೆ. ಅಲ್ಲಿಂದ ಅದೇ ಸರ್ವೆ ನಂಬರು ದಕ್ಷಿಣ ಸರಹದ್ದು ಮಾರ್ಗ ಅನುಸರಿಸಿ, ಹಂಗಳಹೊಸಹಳ್ಳಿ ಸರ್ವೆ 57ನೆ ನಂಬರು ನೈರುತ್ಯ ಮೂಲೆಯನ್ನು ಸಂಧಿಸುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯವಾಗಿ 1 ಫರ್ಲಾಂಗು ಫಾಸಲೆ ಅದೇ ಗ್ರಾಮದ ಸರ್ವೆ 85ನೆ ನಂಬರು ಪಶ್ಚಿಮ ಸರಹದ್ದು ಮಾರ್ಗವಾಗಿ ಹೋಗಿ ಹಂಗಳಹೊಸಹಳ್ಳಿ, ಸಿದ್ದಯ್ಯನಪುರದ ಗ್ರಾಮಗಳ ಮತ್ತು ಬಂಡೀಪುರದ ಮನ್ನಾಜಂಗಲಿಯ ಬಾಬತು ಮಾದಗಿತ್ತಿದುರ್ಗದ ಮೇಲಿರುವ ಮುಕ್ತುಪ್ಪ ಬಾಂದಿಗೆ ಸೇರುತ್ತದೆ.

ದಕ್ಷಿಣಕ್ಕೆ—ನಂತರ ವಾಯವ್ಯಕ್ಕೆ ತಿರಗಿ, ಬಂಡೀಪುರದ ಮನ್ನಾಜಂಗಲಿ ಸರಹದ್ದು ಮಾರ್ಗವಾಗಿ ಹೋಗಿ ಗೋಪಾಲಪುರ ಮತ್ತು ಕುಣಗಹಳ್ಳಿ ಗ್ರಾಮಗಳ ಗಡಿ ಬಾಂದನ್ನು ಸೇರಿ, ಅಲ್ಲಿಂದ ವಾಯವ್ಯಾಭಿಮುಖವಾಗಿ ಅದೇ ಸರಹದ್ದಿನಲ್ಲಿ ಹೊರಟು ಗೋಪಾಲಪುರ ಮತ್ತು ಲಕ್ಕೀಪುರ ಗ್ರಾಮಗಳ ಮತ್ತು ಬೀರಂಬಾಡಿ ಮತ್ತು ಬಂಡಿಪುರ ಮನ್ನಾ ಜಂಗಲಿಗಳ ಗಡಿ ಬಾಂದನ್ನು ಸೇರುತ್ತದೆ.

ಪಶ್ಚಿಮಕ್ಕೆ—ನಂತರ ಉತ್ತರಾಭಿಮುಖವಾಗಿ ಬೀರಂಬಾಡಿ ಮನ್ನಾ ಜಂಗಲಿಯ ಎಲ್ಲೆಯನ್ನು ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಯೆಟ್ ಫಾರೆಸ್ಟ್ ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕು ಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸಮನೆಯನ್ನು ಕಟ್ಟಕೂಡದು, ಸ್ಟ್ಲಾಟೇರ್ಪ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ-ಹಕ್ಕನ್ನುಂಟು ಮಾಡಕೂಡದು. ಮತ್ತು ಇಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಯೆಟ್ ಫಾರೆಸ್ಟ್ ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಯೆಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು; ಅಥವಾ ಯಾವ ವಸ್ತುಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೈದಾದರೂ ಜಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಯೆಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಯೆಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದೆ ಉರಿಯನ್ನು ಆರಿಸದೇ ಇರುವದು.

(c) ಈ ಖಯ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟ್ ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟ್ ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟ್ ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನುತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕು ದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 8ನೆ ಡಿಸೆಂಬರ್ 1909.

ಕಣಿಯನಪುರ ಬ್ಲಾಕ್ II ಫಾರೆಸ್ಟ್ಟು, ಮೈಸೂರು ಡಿಸ್ಟ್ರಿಕ್ಟ್ಟು.

ಸ್ ಸ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ಟು ರೆಗ್ಯುಲೇಷ್ ಸ್ 5ನೆ ಸೆಕ್ಷ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್‌ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ನಂಬರು ರೆ. 2709—ಫಾರೆಸ್ಟ್ಟು 192-08-6; 27-9 09; 30-9-09ನೆ ಇಸವಿಯ ಗೆಜೆಟ್‌ನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟ್	ತಾಲ್ಲೂಕು.	ಹೋಬ್ಳಿ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ವಿವರಣೆ.
ಮೈಸೂರು.	ಗುಂಡ್ಲುಪೇಟೆ.	ಹಂಗಳ.	8,665 ಎಕ್ರೆ, 37 ಗುಂಟೆ.	ಕಣಿಯನಪುರದ ಬ್ಲಾಕ್ II.	ಇರುವ ಪ್ರದೇಶ—ಬಂಡಿಪುರದ ಮನ್ನಾ ಜಂಗಲಿಗೆ ಪೂರ್ವದಲ್ಲಿರುವ ಜಂಗಲ್ ಪ್ರದೇಶ.

ಚಕ್ಕುಬಂದಿ.

ಉತ್ತರ—ಮಾದಗಿತ್ತಿದುರ್ಗದ ಮೇಲಿರುವ ಕಳ್ಳಿಪುರ, ಹಂಗಳ ಹೊಸಹಳ್ಳಿ ಮತ್ತು ಸಿದ್ದಯ್ಯನಪುರ ಗ್ರಾಮಗಳ ಮತ್ತು ಬಂಡೀಪುರದ ಮನ್ನಾ ಜಂಗಲಿಯ ಗಡಿ ಬಾಂದಿನಿಂದ ಲೈನ್ ಹೊರಟು $12\frac{3}{4}$ ಫರ್ಲಾಂಗು ಫಾಸಲೆ ಸಿದ್ದಯ್ಯನಪುರದ ಸರ್ವೆ 83ನೆ ನಂಬರಿನ ದಕ್ಷಿಣ ಸರಹದ್ದನ್ನು. ಅನುಸರಿಸಿ ಪೂರ್ವಾಭಿಮುಖವಾಗಿ ಹೋಗುತ್ತದೆ, ಅಲ್ಲಿಂದ ಆಗ್ನೇಯವಾಗಿ $3\frac{1}{4}$ ಫರ್ಲಾಂಗು ಫಾಸಲೆ ಹೋಗಿ ಮೇಲಕಾಮನಹಳ್ಳಿ ಸರ್ವೆ 1ನೆ ನಂಬರು ನೈರುತ್ಯ ದಿಕ್ಕಿನ ಮೂಲೆಯಿಂದ ನೈರುತ್ಯಕ್ಕೆ ಸುಮಾರು $\frac{1}{2}$ ಫರಲಾಂಗು ಫಾಸಲೆಯಲ್ಲಿರುವ ಬಂದು ಫಾರೆಸ್ಟ್ಟು ಮಾರ್ಕಿಗೆ ಸೇರುತ್ತದೆ. ಅಲ್ಲಿಂದ ಆಗ್ನೇಯಾಭಿಮುಖವಾಗಿ $6\frac{1}{4}$ ಫರ್ಲಾಂಗು ದೂರದಲ್ಲಿ ಮೇಲಕಾಮನಹಳ್ಳಿಯ ಸರ್ವೆ 2ನೆ ನಂಬರು ನೈರುತ್ಯ ಮೂಲೆಯನ್ನು ಮುಟ್ಟಿ, ಮೈಸೂರು-ನೀಲಗಿರಿ ರಸ್ತೆಯ 132ನೆ ಮೈಲಿ 1ನೆ ಫರ್ಲಾಂಗು ಸೇರುತ್ತದೆ. ಅಲ್ಲಿಂದ ಆಗ್ನೇಯಾಭಿಮುಖವಾಗಿ 6 ಫರಲಾಂಗು ಫಾಸಲೆ ಬಂಡೀಪುರದ ಡಿಸ್ಟ್ರಿಕ್ಟ್ಟು ಫಾರೆಸ್ಟ್ಟು ಮಾರ್ಗವಾಗಿ ಹೊರಟು ಸಿದ್ದಾಪುರದ ವಾಯವ್ಯ ಮೂಲೆಯನ್ನು ಸೇರಿತ್ತೆ. ಅನಂತರ ಸಿದ್ದಾಪುರ, ಶಿವಪುರ, ಮತ್ತು ಹುಂಡಿಪುರ ಗ್ರಾಮಗಳ ಪಶ್ಚಿಮ ಗಡಿಯನ್ನನುಸರಿಸಿ ಹುಂಡಿಪುರದ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಪೂರ್ವವಾಗಿ ಸದರೀ ಗ್ರಾಮದ ದಕ್ಷಿಣ ಗಡಿಯನ್ನನುಸರಿಸಿ ಕಬ್ಬಾಪುರ ಸರ್ವೆ ನಂ ರ 77ರ ವಾಯವ್ಯ ಮೂಲೆಯನ್ನು ಸೇರುತ್ತದೆ.

ಪೂರ್ವಕ್ಕೆ—ಇಲ್ಲಿಂದ ಆಗ್ನೇಯಕ್ಕೆ ಕಬ್ಬಾಪುರದ ಸರ್ವೆ 77ನೆ ನಂಬರು ಮಾರ್ಗವಾಗಿ $9\frac{1}{2}$ ಫರ್ಲಾಂಗು ಹೋಗಿ ಅದೇ ಗ್ರಾಮದ ಸರ್ವೆ 18ನೆ ನಂಬರು ನೈರುತ್ಯ ಮೂಲೆಯನ್ನು ಸೇರಿ, ಅದೇ ದಿಕ್ಕಿನಲ್ಲಿ ಕಬ್ಬಾಪುರ, ಜಕ್ಕಹಳ್ಳಿ ಮತ್ತು ಮಂಗಲ ಗ್ರಾಮಗಳ ಮುಗ್ಗಡಿ ಬಾಂದನ್ನು ಮುಟ್ಟುತ್ತದೆ. ವಾಯವ್ಯವಾಗಿ ಮಂಗಳದ 59ನೆ ನಂಬರಿನ ಉತ್ತರ ಗಡಿಯನ್ನನುಸರಿಸಿ ಅದರ ವಾಯವ್ಯ ಮೂಲೆಯನ್ನು ಸೇರಿ, ನಂತರ ದಕ್ಷಿಣಾಭಿಮುಖವಾಗಿ ಅದೇ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಮಂಗಲ ಗ್ರಾಮದ ಸರ್ವೆ 58ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ಅದೇ ದಿಕ್ಕಿನಲ್ಲಿ ಮಂಗಲದ ಸರ್ವೆ 25-24ನೆ ನಂಬರುಗಳ ಮಾರ್ಗವಾಗಿ $6\frac{1}{2}$ ಫರ್ಲಾಂಗು ಹೋಗಿ, ಸದರಿ ಗ್ರಾಮದ ಸರ್ವೆ 39ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ. ನಂತರ ನೈರುತ್ಯವಾಗಿ ಸರ್ವೆ 39ನೆ ನಂಬರಿನ ಪಶ್ಚಿಮ ಸರಹದ್ದನ್ನು ಅನುಸರಿಸಿ ಮತ್ತು ಮಂಗಲದ ಸರ್ವೆ 20ನೆ ನಂಬರು ಮೂಲಕ $3\frac{3}{4}$ ಫರ್ಲಾಂಗುದೂರ ಹೋಗಿ ಮಂಗಲದ ಸರ್ವೆ 73ನೆ ನಂಬರಿನ ಪಶ್ಚಿಮ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ದಕ್ಷಿಣಾಭಿಮುಖವಾಗಿ $1\frac{1}{2}$ ಫರ್ಲಾಂಗುದೂರ ಹೊರಟು ಮಂಗಲ ಮತ್ತು ಕಣಿಯನಪುರದ ಮಧ್ಯದ ಎಲ್ಲೆಯನ್ನು ಕಣಿಯನಪುರದ ಸರ್ವೆ 26ನೆ ನಂಬರಿನ ವಾಯವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಅದೇ ದಿಕ್ಕಿನಲ್ಲಿ ಕಣಿಯನಪುರದ ಸರ್ವೆ 26ನೆ ನಂಬರು ಪಶ್ಚಿಮ ಮಾರ್ಗವಾಗಿ ಸುಮಾರು $5\frac{3}{4}$ ಫರ್ಲಾಂಗು ದೂರ ಹೋಗಿ, ಕಣಿಯನಪುರದ ಸರ್ವೆ 26ನೆ ನಂಬರು ನೈರುತ್ಯ ಮೂಲೆಯನ್ನು ಸೇರುತ್ತದೆ. ನಂತರ ಆಗ್ನೇಯಕ್ಕೆ ತಿರಿಗಿ ಕಣಿಯನಪುರದ ಸರ್ವೆ 22, 16ನೆ ನಂಬರುಗಳ ಮೇಲೆ $15\frac{1}{4}$ ಫರಲಾಂಗು ಫಾಸಲೆ ಹೋಗಿ ಕಣಿಯನಪುರ ಮತ್ತು ಮಾಯಾರ ಮನ್ನಾ ಜಂಗಲಿಗಳ ಗಡೀಬಾಂದನ್ನು ಸೇರುತ್ತದೆ. ನಂತರ ದಕ್ಷಿಣಾಭಿಮುಖವಾಗಿ ಮಾಯಾರ್ ಮನ್ನಾ ಜಂಗಲಿಯ ಪಶ್ಚಿಮ ಸರಹದ್ದನ್ನು ಅನುಸರಿಸಿ ಮಾಯಾರ್ ನದಿಯನ್ನು ಸೇರುತ್ತದೆ.

ದಕ್ಷಿಣಕ್ಕೆ—ನಂತರ ಪಶ್ಚಿಮಾಭಿಮುಖವಾಗಿ ಮಾಯಾರ್ ನದಿ ಮಾರ್ಗವಾಗಿ ಹೋಗಿ ಬಂಡೀಪುರದ ಮನ್ನಾ ಜಂಗಲಿಯ ಎಲ್ಲೆ ಮತ್ತು ಮಾಯಾರ್ ನದಿ ಸೇರುವ ಸ್ಥಳವನ್ನು ಮುಟ್ಟುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಬಂಡೀಪುರದ ಮನ್ನಾ ಜಂಗಲಿಯ ಸರಹದ್ದು ಲೈನನ್ನು ಮಾದಗಿತ್ತಿ ದುರ್ಗದ ವರೆಗೂ ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವುದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟ್ಯಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನಾವ್ಯವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಬೆಸಡ್ಡಿಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(d) ಈ ಪ್ರಕರಣದಿಂದ ನಿಷೇಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(b) ಜಂಗಲಿಗೆ ಬೆಂಕಿಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವಹಾಗೆ ಬೆಂಕಿಯನ್ನು ಪುರಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗೆಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಗುರುತಿಸುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಬಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷ್ಮಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು, ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನು ತಕ್ಕಂಥಾ ವ್ಯಾಪ್ತಿಯನ್ನು ಸಮೂಯುಮಾಡಿ ಬರಹಪೂರ್ವಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕು ಮಾಡಿಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 8ನೆ ಡಿಸೆಂಬರ್ 1909.

ಜಕ್ಕ ಫಾರೆಸ್ಟು, ಶಿವಮೊಗ್ಗ ಡಿಸ್ಟ್ರಿಕ್ಟು.

ಸ॥ 1900ನೆ ಇಸವಿಯ XIನೆ ನಂಬರು ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್‌ಮೆಂಟಿನಿಂದ ವಿವರಿಸಲ್ಪಟ್ಟ ಜಕ್ಕ ಬಂದಿಯಲ್ಲಿ ಪ್ರದೇಶವು ನಂಬರು ರ. 30 0—ಫಾರೆಸ್ಟು. 58—0—2, 14—10—09; 21—10—09ನೆ ಇಸವಿಯ ಗೆಜೆಟ್ಟಿನಲ್ಲಿ ಫಾಯಿಷ್ಮಾಡಲ್ಪಟ್ಟಿರುತ್ತ:—

ಷೆಡ್ಯೂಲ್.

ತಾಲ್ಲೂಕು	ಪ್ರಾಮುಖ್ಯವಾದ ಹಳ್ಳಿಗಳ ಹೆಸರು.	ಅಂದಾಜು ವಿಸ್ತೀರ್ಣ.	ಗಡಿಗಳ ಹೆಸರು.	ಬ್ಲಾಕು, ಇರತಕ್ಕ ಸ್ಥಳ.
ಶಿವಮೊಗ್ಗ.	ನಗರ ಲಕ್ಕವಳ್ಳಿ.	ಸ್ಕ್ವೇರ್ ಮೈಲಿ 5 ಚದರ ಅಥವಾ 3,541 ಎಕರೆ.	ಜಕ್ಕ.	**ಕೊಡಚಾದ್ರಿ ಮನ್ನಾ ಜಂಗಲಿಯ ಪೂರ್ವ ಭಾಗದ ಬಡಾವಣಿ.** ಉತ್ತರಕ್ಕೆ—ದಕ್ಷಿಣಕನಡ ಜಿಲ್ಲಾ ಕುಂದಾಪುರದ ತಾಲ್ಲೂಕು ಕರಕವುಡ ಅಲಗೋಡು ಗ್ರಾಮಗಳ ಮತ್ತು ಮೈಸೂರು ಸೀಮೆಯ ನಗರ ತಾಲ್ಲೂಕು ಮಂಜಗಳಲೆ ಗ್ರಾಮದ ಮುಕ್ಕುಪ್ಪೆ ಬಾಂದಿನಿಂದ ಲೈನ್ ಹೊರಟು ಆಗ್ನೇಯವಾಗಿ ಸುಮಾರು 6 ಫರಲಾಂಗು, ಅಲಗೋಡು ಗ್ರಾಮದ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ಗ್ರಾಮ ಮತ್ತು ನಿಟ್ಟೂರು, ಮಂಜಗಳಲೆ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರಲಾಂಗು ಮಂಜಗಳಲೆ ಸರ್ವೆ ನಂಬರ್ 88ರಲ್ಲಿ ಹಾದು ಅದೇ ಗ್ರಾಮದ ಸರ್ವೆ ನಂಬರು 91ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯ ಮತ್ತು ನೈರುತ್ಯವಾಗಿ ಸರ್ವೆ ನಂಬರು 92ರ ಉತ್ತರ ಮತ್ತು ಪಶ್ಚಿಮ ಗಡಿಗಳನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ

ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು 5 ಸರಪಣಿ ಸರ್ವೆ ನಂಬರು 88ರಲ್ಲಿ ಹಾದು ಸರ್ವೆ ನಂಬರು 93ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಮತ್ತು ಪೂರ್ವ ಗಡಿಗಳನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ ಸುಮಾರು 5 ಸರಪಣಿ ಸರ್ವೆ ನಂಬರು 92ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 10ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 5 ಫರಲಾಂಗು 5 ಸರಪಣಿ, ಸರ್ವೆ ನಂಬರು 10ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 70ರ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸದರಿ ನಂಬರಿನ ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 72ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯವಾಗಿ 1 ಫರಲಾಂಗು 5 ಸರಪಣಿ ಸರ್ವೆ ನಂಬರು 73ರ ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 87ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಉತ್ತರ ಗಡಿಯನ್ನನುಸರಿಸಿ ಸದರಿ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 1 ಫರಲಾಂಗು ಸರ್ವೆ ನಂಬರು 88ರಲ್ಲಿ ಹಾದು ಸರ್ವೆ ನಂಬರು 85ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ದಿಕ್ಕಿನಲ್ಲಿ 1 ಫರಲಾಂಗು ಸರ್ವೆ ನಂಬರು 84ರಲ್ಲಿ ಹಾದು ಸರ್ವೆ ನಂಬರು 83ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು 2 ಸರಪಣಿ ಸರ್ವೆ ನಂಬರು 84ರಲ್ಲಿ ಹಾದು ಸರ್ವೆ ನಂಬರು 78ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಪೂರ್ವವಾಗಿ ಸುಮಾರು 6 ಫರಲಾಂಗು ಸರ್ವೆ ನಂಬರುಗಳು 73—70ರಲ್ಲಿ ಹಾದು ಸರ್ವೆ ನಂಬರು 62ರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ 1 ಫರಲಾಂಗು 5 ಸರಪಣಿ ಸರ್ವೆ ನಂಬರು 70ರಲ್ಲಿ ಹಾದು ಸರ್ವೆ ನಂಬರು 10ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಉತ್ತರ ಮತ್ತು ಪೂರ್ವಾಭಿಮುಖವಾಗಿ 5 ಫರಲಾಂಗು 5 ಸರಪಣಿ ಸರ್ವೆ ನಂಬರು 10ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಪೂರ್ವ ಮತ್ತು ದಕ್ಷಿಣವಾಗಿ 5 ಫರಲಾಂಗು 3 ಸರಪಣಿ ಸರ್ವೆ ನಂಬರು 177ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು 5 ಸರಪಣಿ ಸದರಿ ಸರ್ವೆ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ ಸುಮಾರು 5 ಸರಪಣಿ ಸರ್ವೆ ನಂಬರು 179ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರಲಾಂಗು 5 ಸರಪಣಿ ಸರ್ವೆ ನಂಬರು 252—258ರಲ್ಲಿ ಹಾದು ಸರ್ವೆ ನಂಬರು 259ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 2 ಫರಲಾಂಗು 5 ಸರಪಣಿ ಮಂಜಗಳಲೆ ಸರ್ವೆ ನಂಬರು 258, ಕಟ್ಟನಹೊಳೆ ಸರ್ವೆ ನಂಬರು 38ರಲ್ಲಿ ಹಾದು ಸರ್ವೆ ನಂಬರು 50ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ 5 ಸರಪಣಿ ಸದರಿ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಅದೇದಿಕ್ಕಿನಲ್ಲಿ ಸುಮಾರು 5 ಫರಲಾಂಗು ದೂರ ಸರ್ವೆ ನಂಬರು 38ರಲ್ಲಿ ಹಾದು ಸರ್ವೆ ನಂಬರು 26ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 5 ಸರಪಣಿ ಸರ್ವೆ ನಂಬರು 38ರಲ್ಲಿ ಹಾದು ಸರ್ವೆ ನಂಬರು 25ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ 8 ಸರಪಣಿ ಫೂತಲೆ ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 4 ಫರಲಾಂಗು 2 ಸರಪಣಿ ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 39ರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 3 ಫರಲಾಂಗು 5 ಸರಪಣಿ ಕಟ್ಟನಹೊಳೆ ಸರ್ವೆ ನಂಬರು 36 ಮಂಜಗಳಲೆ ಸರ್ವೆ ನಂಬರು 253ರಲ್ಲಿ ಹಾದು ಮಂಜಗಳಲೆ ಸರ್ವೆ ನಂಬರು 263ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ 5 ಸರಪಣಿ ಸದರಿ ನಂಬರಿನ ಪೂರ್ವ ಗಡಿಯನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 5 ಫರಲಾಂಗು 5 ಸರಪಣಿ ಮಂಜಗಳಲೆ ಗ್ರಾಮದ ಸರ್ವೆ ನಂಬರುಗಳು 252—252ರಲ್ಲಿ ಹಾದು ಸರ್ವೆ ನಂಬರು 255ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 6 ಫರ್ಲಾಂಗು 5 ಸರಪಣಿ ಸರ್ವೆ ನಂಬರು 252ರಲ್ಲಿ ಹಾದು ಮತ್ತಿಕೈ ಸರ್ವೆ ನಂಬರು 35ರ ವಾಯವ್ಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯವಾಗಿ 2 ಫರ್ಲಾಂಗು ಮತ್ತಿಕೈ ಸರ್ವೆ ನಂಬರು 35ರ ಪಶ್ಚಿಮ ಗಡಿಯನ್ನನುಸರಿಸಿಯೂ ಮತ್ತು ದಕ್ಷಿಣವಾಗಿ 6 ಫರ್ಲಾಂಗು ಸರ್ವೆ ನಂಬರು 90ರ ಪಶ್ಚಿಮ ಗಡಿಯನ್ನನುಸರಿಸಿ ಮಂಜಗಳಲೆ, ಮತ್ತಿಕೈ, ಕಟ್ಟನಹೊಳೆ ಗ್ರಾಮಗಳ ಮುಕ್ಕಟ್ಟೆಪ್ಪೆ ಬಾಂದಿಗೆ ಸೇರುತ್ತದೆ. ನಂತರ ಪೂರ್ವವಾಗಿ 2 ಫರ್ಲಾಂಗು ಸರ್ವೆ ನಂಬರು 90ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 76ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ದಕ್ಷಿಣವಾಗಿ 5 ಫರ್ಲಾಂಗು ಸರ್ವೆ ನಂಬರು 76ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 101ರ ಉತ್ತರ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 4 ಫರ್ಲಾಂಗು ಸರ್ವೆ ನಂಬರು 54ರಲ್ಲಿ ಹಾದು ಸರ್ವೆ ನಂಬರು 14ರ ಉತ್ತರ ಮೂಲೆಗೆ ಸೇರುತ್ತದೆ. ಅಲ್ಲಿಂದ 8 ಸರಪಣಿ ಸದರಿ ಸರ್ವೆ ನಂಬರಿನ ಉತ್ತರ ಗಡಿಯನ್ನನುಸರಿಸಿ ಸರ್ವೆ 24ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರುಗಳು 24, 20, 19, 18, 17 ಮತ್ತು 16ರ ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 16ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸದರಿ ನಂಬರಿನ ಪಶ್ಚಿಮಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರ್ಲಾಂಗು 5 ಸರಪಣಿ ಸರ್ವೆ ನಂಬರು 15ರಲ್ಲಿ ಹಾದು ಸರ್ವೆ ನಂಬರು 23ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 4 ಫರ್ಲಾಂಗು 2 ಸರಪಣಿ ಸರ್ವೆ ನಂಬರು 15ರಲ್ಲಿ ಹಾದು ಸರ್ವೆ ನಂಬರು 1ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 1 ಫರ್ಲಾಂಗು ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 2 ಫರ್ಲಾಂಗು 5 ಸರಪಣಿ ಸರ್ವೆ ನಂಬರು 14ರ ಪೂರ್ವ ಗಡಿಯನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 5 ಫರ್ಲಾಂಗು 5 ಸರಪಣಿ ಸರ್ವೆ ನಂಬರು 84ರಲ್ಲಿ ಹಾದು ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಪಶ್ಚಿಮಾಭಿಮುಖವಾಗಿ ಸುಮಾರು 1 ಮೈಲಿ 5 ಫರ್ಲಾಂಗು 5 ಸರಪಣಿದೂರ ಕಟ್ಟನಹೊಳೆಯ ಸರ್ವೆ ನಂಬರು 126ರ ಉತ್ತರ ಗಡಿಯನ್ನನುಸರಿಸಿ ಸದರಿ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯಾಭಿಮುಖವಾಗಿ 1 ಮೈಲಿ 2 ಫರ್ಲಾಂಗು 5 ಸರಪಣಿ ದಕ್ಷಿಣ ಕನಡ ಜಿಲ್ಲಾ ಗಡಿಯನ್ನನುಸರಿಸಿ ಮೈಸೂರು ಶೀಮೆಯ ಮಂಜಗಳಲೆ, ಕಟ್ಟನಹೊಳೆ ಗ್ರಾಮಗಳ ಮತ್ತು ಕುಂದಾಪುರ ತಾಲ್ಲೂಕು ಬಿಳಿಕ್ಕಲ್ ಗ್ರಾಮದ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈಟ್ ವಾಯವ್ಯವಾಗಿ 5 ಫರ್ಲಾಂಗು 5 ಸರಪಣಿ ದಕ್ಷಿಣ ಕನಡ ಜಿಲ್ಲಾ ಗಡಿಯನ್ನನುಸರಿಸಿ ಅದೇ ಮಾರ್ಗವಾಗಿ ಸುಮಾರು 1 ಮೈಲಿ 6 ಫರಲಾಂಗು ಸಾಗರ ತಾಲ್ಲೂಕು ಗಡಿಯನ್ನನುಸರಿಸಿ (ಅಥವಾ ಕೊಡಚಾದ್ರಿ ಮನ್ನಾ ಜಂಗಲಿಯ ಪೂರ್ವ ದಿಕ್ಕಿನ ಡಿನಾರ್ಕೇಷನ್ ಲೈನನ್ನು ಅನುಸರಿಸಿ) ಸಾಗರ ತಾಲ್ಲೂಕು ವೊಳ್ಳೂರು, ಕುಂದಾಪುರದ ತಾಲ್ಲೂಕು ಕರಕವಡಿ, ನಗರ ತಾಲ್ಲೂಕು ಮಂಜಗಳಲೆ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲಾ ಗಡಿಯನ್ನನುಸರಿಸಿ ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟ್ ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮಿನುಗಳ ಮೇಲೆ, ಅಥವಾ ಜಮಿನ್ದಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟುವಾರವು. ಸದರೀ ಜಮಿನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲಿ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮಿನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮಿನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮಿನು ಸ್ಟೇಟ್ ಫಾರೆಸ್ಟ್ ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಬೆಂಕಿಗೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪುತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಲೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಯಾಗಿ ಕ್ರಮವಾಗಿ ಆಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು. ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡಿಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಪ್ತಿಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಬಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮಿನನ್ನಾಗಲೀ ಹಸನೆ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮಿನಿನಲ್ಲಿ ಅಥವಾ ಜಮಿನುಮೇಲಾದರೂ ಅಥವಾ ಅಂಥಾ ಜಮಿನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕು ದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.